# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಬುಧವಾರ, ೧೯, ಆಗಸ್ಟ್, ೨೦೨೬ (ಶ್ರಾವಣ, ೨೮, ಶಕವರ್ಷ, ೧೯೪೮)<br>BENGALURU, WEDNESDAY, 19, AUGUST, 2026 ( SHRAVANA , 28, SHAKAVARSHA, 1948) | ನಂ. ೭೩೯<br>No. 739 |


## GOVERNMENT OF KARNATAKA

No. DPAR 48 SCR 2026

Karnataka Government Secretariat,
Vidhana Soudha,
Dr. B.R Ambedkar Veedhi,
Bengaluru, dated: 19.08.2026

## NOTIFICATION-II

The draft of the following rules, to repeal the Karnataka Civil Services (Recruitment to Ministerial Posts) Rules, 1978 which the Government of Karnataka proposes to make in exercise of the powers conferred by sub-section (1) of section 3, read with section 8 of the Karnataka State Civil Services Act, 1978 (Karnataka Act 14 of 1990) is hereby published as required by clause (a) of sub-section (2) of section (3) of the said Act, for the information of all persons likely to be affected thereby and notice is hereby given that the said draft will be taken into consideration after the expiry of fifteen days from the date of its publication in the Official Gazette.

Any objection or suggestion which may be received by the State Government from any person with respect to the said draft before the expiry of the period specified above will be considered by the State Government. Objections or suggestions may be addressed to the Secretary to Government, Department of Personnel and Administrative Reforms, Vidhana Soudha, Bengaluru-560 001.

## DRAFT RULES

**1. Title and commencement.**- (1) These rules may be called Karnataka Civil Services (Recruitment to Ministerial Posts) (Repeal) Rules, 2026.

(2) They shall come into force from the date of their final publication in the Official Gazette.

**2. Repeal and savings.**- On and from the date of commencement of the Karnataka Civil Services (Direct Recruitment) (General) (Amendment) Rules, 2026, the Karnataka Civil Services (Recruitment to Ministerial Posts) Rules, 1978 shall stand repealed:

Provided that, such repeal shall not affect the previous operation of the said rules or anything duly done or suffered there under, or affect any right, privilege, obligation or liability acquired, accrued or incurred under the said rules.

Provided further that, all proceedings commenced under the repealed rules and pending on the date of commencement of these rules, shall be continued and disposed of as if the said rules had not been repealed.

By Order and in the name of the
Governor of Karnataka

(Prathibha. K)
Under Secretary to Government
Department of Personnel and
Administrative Reforms,
(Service Rules-3).

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 48 ಸೇವನೆ 2026

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಡಾ॥ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 19.08.2026

## ಅಧಿಸೂಚನೆ-II

ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ 8 ನೇ ಪ್ರಕರಣದೊಂದಿಗೆ ಓದಲಾದಂತೆ, 3ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಿರುವ ಕರ್ನಾಟಕ ನಾಗರಿಕ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 1978ನ್ನು ನಿರಸನಗೊಳಿಸುವ ಸಲುವಾಗಿ ಈ ಕೆಳಗಿನ ಕರಡನ್ನು, ಸದರಿ ಅಧಿನಿಯಮದ 3ನೇ ಪ್ರಕರಣದ (2)ನೇ ಉಪಪ್ರಕರಣದ ಖಂಡ (ಎ)ರ ಮೂಲಕ ಅಗತ್ಯ ಪಡಿಸಲಾದಂತೆ, ಇದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ, ಈ ಮೂಲಕ ಪ್ರಕಟಿಸಲಾಗಿದೆ ಮತ್ತು ಸದರಿ ಕರಡನ್ನು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಹದಿನೈದು ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ಈ ಮೂಲಕ ಸೂಚಿಸಲಾಗಿದೆ.

ಸದರಿ ಕರಡು ನಿಯಮಗಳಿಗೆ ಸಂಬಂಧಪಟ್ಟಂತೆ ಮೇಲೆ ಗೊತ್ತುಪಡಿಸಿದ ಅವಧಿ ಕೊನೆಗೊಳ್ಳುವ ಮುಂಚೆ ಯಾವುದೇ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನ ಸೌಧ, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001 ಇವರಿಗೆ ಸಲ್ಲಿಸತಕ್ಕದ್ದು.

## ಕರಡು ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ.**- (1) ಈ ನಿಯಮಗಳನ್ನು ಕರ್ನಾಟಕ ನಾಗರಿಕ ಸೇವೆಗಳು (ಲಿಪಿಕ ಹುದ್ದೆಗಳ ನೇಮಕಾತಿ) (ನಿರಸನ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಇವು ಅಧಿಕೃತ ರಾಜ್ಯ ಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ನಿರಸನ ಮತ್ತು ಉಳಿಸುವಿಕೆ.**- ಕರ್ನಾಟಕ ನಾಗರಿಕ ಸೇವೆಗಳು (ನೇರ ನೇಮಕಾತಿ) (ಸಾಮಾನ್ಯ) (ತಿದ್ದುಪಡಿ) ನಿಯಮಗಳು, 2026ರ ಪ್ರಾರಂಭದ ದಿನಾಂಕದಿಂದ, ಕರ್ನಾಟಕ ನಾಗರಿಕ ಸೇವೆಗಳ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 1978 ರದ್ದಾಗತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



"ಪರಂತು, ಅಂತಹ ನಿರಸನವು ಸದರಿ ನಿಯಮಗಳನ್ವಯ ಕೈಗೊಂಡ ಹಿಂದಿನ ಕ್ರಮಗಳ ಮೇಲೆ ಅಥವಾ ಅವುಗಳ ಅಡಿಯಲ್ಲಿ ಕ್ರಮಬದ್ಧವಾಗಿ ಮಾಡಲಾದ ಅಥವಾ ಅನುಭವಿಸಲಾದ ಯಾವುದೇ ಸಂಗತಿಯ ಮೇಲೆ ಪರಿಣಾಮ ಬೀರುವಂತಿರತಕ್ಕದ್ದಲ್ಲ; ಅಥವಾ ಸದರಿ ನಿಯಮಗಳ ಅಡಿಯಲ್ಲಿ ಹೊಂದಲಾದ, ಸಂಚಿತವಾದ ಅಥವಾ ಉಂಟಾದ ಯಾವುದೇ ಹಕ್ಕು, ಸವಲತ್ತು, ಬಾಧ್ಯತೆ ಅಥವಾ ಹೊಣೆಗಾರಿಕೆಯ ಮೇಲೆ ಪರಿಣಾಮ ಬೀರುವಂತಿರತಕ್ಕದ್ದಲ್ಲ.

ಪರಂತು, ನಿರಸನಗೊಂಡ ನಿಯಮಗಳ ಅಡಿಯಲ್ಲಿ ಪ್ರಾರಂಭಗೊಂಡು, ಈ ನಿಯಮಗಳು ಪ್ರಾರಂಭವಾದ ದಿನಾಂಕದಂದು ಬಾಕಿ ಇರುವ ಎಲ್ಲಾ ಪ್ರಕ್ರಿಯೆಗಳನ್ನು, ಸದರಿ ನಿಯಮಗಳು ನಿರಸನಗೊಂಡಿರದಿದ್ದರೆ ಹೇಗೆ ಮುಂದುವರಿಸಿ ಇತ್ಯರ್ಥಪಡಿಸಲಾಗುತ್ತಿತ್ತೋ ಅದೇ ರೀತಿಯಲ್ಲಿ ಮುಂದುವರಿಸಿ ಇತ್ಯರ್ಥಪಡಿಸತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪ್ರತಿಭಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-3)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಬುಧವಾರ, ೧೯, ಆಗಸ್ಟ್, ೨೦೨೬ (ಶ್ರಾವಣ, ೨೮, ಶಕವರ್ಷ, ೧೯೪೮)<br>BENGALURU, WEDNESDAY, 19, AUGUST, 2026 ( SHRAVANA , 28, SHAKAVARSHA, 1948) | ನಂ. ೭೪೦<br>No. 740 |


## GOVERNMENT OF KARNATAKA

No. DPAR 48 SCR 2026

Karnataka Government Secretariat,
Vidhana Soudha,
Dr. B.R Ambedkar Veedhi,
Bengaluru, dated:19.08.2026

## NOTIFICATION - I

The draft of the following rules, further to amend the Karnataka Civil Services (Direct Recruitment) (General) Rules, 2021 which the Government of Karnataka proposes to make in exercise of the powers conferred by sub-section (1) of section 3, read with section 8 of the Karnataka State Civil Services Act, 1978 (Karnataka Act 14 of 1990) is hereby published as required by clause (a) of sub-section (2) of section (3) of the said Act, for the information of all persons likely to be affected thereby and notice is hereby given that the said draft will be taken into consideration after the expiry of fifteen days from the date of its publication in the Official Gazette.

Any objection or suggestion which may be received by the State Government from any person with respect to the said draft before the expiry of the period specified above will be considered by the State Government. Objections or suggestions may be addressed to the Secretary to Government, Department of Personnel and Administrative Reforms, Vidhana Soudha, Dr. B.R Ambedkar Veedhi, Bengaluru-560 001.

## DRAFT RULES

1. **Title and commencement:-** (1) These rules may be called the Karnataka Civil Services (Direct Recruitment) (General) (Amendment) Rules, 2026.

(2) They shall come into force from the date of their final publication in the Official Gazette.

2. **Amendment of rule 2:-** In the Karnataka Civil Services (Direct Recruitment) (General) Rules, 2021 (herein after referred as said rules), in rule 2, in sub-rule (1),-

(i) in clause (d), the word "and", shall be omitted.

(ii) after clause (d)" the following provisos shall be inserted namely:-

"Provided that, notwithstanding anything contained in any rules of recruitment for the time being in force, the minimum educational qualification for direct recruitment to the post of Assistant or First Division Assistant or equivalent posts shall be a Bachelor's Degree awarded by a University established by law in India or an equivalent qualification.

Provided further that, notwithstanding anything contained in any cadre and recruitment rules for the time being in force, the minimum educational qualification for direct recruitment to the post of Junior Assistant or Second Division Assistant or equivalent posts shall be the Pre-University Course Examination or an equivalent qualification.

3. **Insertion of new rule 4A:** In the said rules, after rule 4, the following shall be inserted, namely:-

**"4A. Indication of preference by candidates.-** The candidates shall clearly indicate in their application forms the order of preference to the services or posts, from among those specified in the advertisement under rule 4, for which they wish to be considered for selection, if a candidate has indicated his order of preference to only a few of the services or posts, he may be considered for any of the remaining services or posts. If he has not indicated his order of preference any of the services or posts, he may be considered for any of the services or posts."

**4. Insertion of new rule 5A:-** In the said rules, after rule 5, the following shall be inserted, namely:-

**"5A.- Admission to the competitive examination.**-No candidate shall be admitted to a competitive examination unless he possesses the minimum educational qualification specified in clause (d) of sub-rules (1) of rule 2 and issued a certificate of admission by the Selecting Authority. The decision of the Selecting Authority as to the eligibility or otherwise of a candidate for admission to the competitive examination shall be final."

**5. Amendment of rule 6:** In the said rules, in rule 6,-

(i) in sub-rule (1), in clause (c), after the words "policy of the State" the words "on the basis of preferences indicated by the candidate in his application", shall be inserted.

(ii) in sub-rule (2),-

(a) in the heading, after the words "C. Posts", the words "(non-technical)", shall be inserted.

(b) in clause (c), after the words "policy of the State" the words "on the basis of preferences indicated by the candidate in his application", shall be inserted.

(iii) after sub-rule (2), the following shall be inserted, namely:-

**"(3) In respect of Group-C posts (Technical):-**

(A) For the posts other than the posts mentioned in sub-rule (2) shall consist of two papers, each paper carrying 100 marks and totalling to 200 marks. These two papers are compulsory. The syllabus for paper-1 shall be as specified in item (i) of clause (a) of sub-rule (2) **for the posts requiring degree qualification and item (i) of clause (b) of sub-rule (2) for the posts requiring below the degree level qualification.**

(B) The syllabus for paper II shall be determined by the selection authority having regard to the nature of the post and the qualifying examination, in consultation with the head of the department or the appointing authority concerned.

(C) There shall be negative marking in both papers and one fourth of the marks assigned to a question shall be deducted for every incorrect answer.

(D) A list of candidates shall be prepared in the order of merit determined on the basis of the percentage of total marks secured by the candidates in the above competitive examination subject to reservation policy of the State on the basis of preferences indicated by the candidate in his application:

Provided that, a candidate must secure at least 35 percent of the total marks in the competitive examination to qualify.

**(4) Duration of Examination:-** To conduct the examination, for the syllabus specified in sub-rule (1), sub-rule (2) and sub-rule (3) the maximum time of 120 minutes should be fixed for each paper.

**6. Amendment to rule 11**:- In the said rules, in rule 11,-

(i) in sub-rule (1), after the words "policy of the State", the words "based on the order of preference indicated by the candidates in their applications", shall be inserted.

(ii) after sub-rule (4) the following shall be inserted, namely:-

"(4-A) An appointing authority may seek the assignment of candidates from the additional list prepared by the selecting authority under sub-rule (3), to the extent that the candidates to whom orders of appointment have been issued under rule 12 are found unsuitable for appointment or fail to report for duty within the prescribed period of joining time or such extended period as may be allowed. In such cases, the selecting authority shall assign a candidate only from the additional list, without referring to the main list already assigned to other appointing authorities, and the candidate so assigned shall belong to the same category of vertical and horizontal reservation as the candidate who was found unsuitable for appointment or failed to report for duty."

7. **Insertion of new rule 11A:** In the said rules, after rule 11, the following shall be inserted, namely :-

**"11A. Candidates to serve anywhere in the State.-** Notwithstanding the order of preference indicated by a candidates in their applications under Rule 4A, candidates selected and appointed under these Rules shall be liable to serve in any part of the State of Karnataka.

By Order and in the name of the
Governor of Karnataka

(Prathibha. K)
Under Secretary to Government
Department of Personnel and
Administrative Reforms,
(Service Rules-3).

## **ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 48 ಸೇವನೆ 2026

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಡಾ॥ ಬಿ.ಆರ್.ಅಂಬೇಡ್ಕರ್‌ವೀದಿ,
ಬೆಂಗಳೂರು, ದಿನಾಂಕ: 19.08.2026

## **ಅಧಿಸೂಚನೆ-I**

ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರ 8 ನೇ ಪ್ರಕರಣದೊಂದಿಗೆ ಓದಲಾದಂತೆ, 3ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಿರುವ ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021ನ್ನು ಮತ್ತಷ್ಟು ತಿದ್ದುಪಡಿ ಮಾಡುವ ಸಲುವಾಗಿ ಈ ಕೆಳಗಿನ ನಿಯಮಗಳ ಕರಡನ್ನು, ಸದರಿ ಅಧಿನಿಯಮದ 3ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಮೂಲಕ ಅಗತ್ಯ ಪಡಿಸಲಾದಂತೆ, ಇದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ, ಈ ಮೂಲಕ ಪ್ರಕಟಿಸಲಾಗಿದೆ ಮತ್ತು ಸದರಿ ಕರಡನ್ನು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಹದಿನೈದು ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ಈ ಮೂಲಕ ಸೂಚಿಸಲಾಗಿದೆ.

ಸದರಿ ಕರಡು ನಿಯಮಗಳಿಗೆ ಸಂಬಂಧಪಟ್ಟಂತೆ ಮೇಲೆ ಗೊತ್ತುಪಡಿಸಿದ ಅವಧಿ ಕೊನೆಗೊಳ್ಳುವ ಮುಂಚೆ ಯಾವುದೇ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನ ಸೌಧ, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001 ಇವರಿಗೆ ಸಲ್ಲಿಸತಕ್ಕದ್ದು.

## **ಕರಡು ನಿಯಮಗಳು**

**1. ಶೀರ್ಷಿಕೆ ಮತ್ತು ಪ್ರಾರಂಭ.**- (1) ಈ ನಿಯಮಗಳನ್ನು ಕರ್ನಾಟಕ ನಾಗರಿಕ ಸೇವೆಗಳು (ನೇರ ನೇಮಕಾತಿ) (ಸಾಮಾನ್ಯ) (ತಿದ್ದುಪಡಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಇವು ಅಧಿಕೃತ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ನಿಯಮ 2ರ ತಿದ್ದುಪಡಿ**:- ಕರ್ನಾಟಕ ಸಿವಿಲ್ ಸೇವೆಗಳ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021 (ಇನ್ನು ಮುಂದೆ "ಸದರಿ ನಿಯಮಗಳು" ಎಂದು ಉಲ್ಲೇಖಿಸಲಾಗಿದೆ) ರಲ್ಲಿ, ನಿಯಮ 2ರಲ್ಲಿ, ಉಪ ನಿಯಮ (1)ರಲ್ಲಿ,-

(i) ಖಂಡ (ಡಿ)ಯಲ್ಲಿ, "ಮತ್ತು" ಎಂಬ ಪದವನ್ನು ಕೈಬಿಡತಕ್ಕದ್ದು.

(ii) ಖಂಡ (ಡಿ)ಯ ನಂತರ ಈ ಕೆಳಗಿನ ಪರಂತುಕಗಳನ್ನು ಸೇರಿಸತಕ್ಕದ್ದು,

"ಪರಂತು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ನೇಮಕಾತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಸಹಾಯಕ ಅಥವಾ ಪ್ರಥಮ ದರ್ಜೆ ಸಹಾಯಕ ಅಥವಾ ಸಮಾನ ಹುದ್ದೆಗಳ ನೇರ ನೇಮಕಾತಿಗೆ, ಭಾರತದಲ್ಲಿ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾಲಯವು ನೀಡಿದ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆಯು ಕನಿಷ್ಠ ಶೈಕ್ಷಣಿಕ ಅರ್ಹತೆಯಾಗಿರತಕ್ಕದ್ದು."

"ಪರಂತು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಕಿರಿಯ ಸಹಾಯಕ, ದ್ವಿತೀಯ ದರ್ಜೆ ಸಹಾಯಕ ಅಥವಾ ಸಮಾನ ಹುದ್ದೆಗಳ ನೇರ ನೇಮಕಾತಿಗೆ ಪದವಿ ಪೂರ್ವ ಪರೀಕ್ಷೆ ಅಥವಾ ತತ್ಸಮಾನ ವಿದ್ಯಾರ್ಹತೆಯು ಕನಿಷ್ಠ ಶೈಕ್ಷಣಿಕ ಅರ್ಹತೆಯಾಗಿರತಕ್ಕದ್ದು."

**3. ಹೊಸ ನಿಯಮ 4ಎ ಸೇರ್ಪಡೆ**:- ಸದರಿ ನಿಯಮಗಳಲ್ಲಿ, ನಿಯಮ 4ರ ನಂತರ, ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು, ಅವುಗಳೆಂದರೆ:-

**"4ಎ. ಅಭ್ಯರ್ಥಿಗಳಿಂದ ಆದ್ಯತೆಯ ಸೂಚನೆ.**- ಅಭ್ಯರ್ಥಿಗಳು ನಿಯಮ 4ರ ಅಡಿಯಲ್ಲಿ ಜಾಹೀರಾತಿನಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳು ಅಥವಾ ಹುದ್ದೆಗಳ ಪೈಕಿ, ಆಯ್ಕೆಗಾಗಿ ಪರಿಗಣಿಸಬೇಕೆಂದು ಬಯಸುವ ಸೇವೆಗಳು ಅಥವಾ ಹುದ್ದೆಗಳ ಆದ್ಯತೆಯ ಕ್ರಮವನ್ನು ತಮ್ಮ ಅರ್ಜಿ ನಮೂನೆಯಲ್ಲಿ ಸ್ಪಷ್ಟವಾಗಿ ಸೂಚಿಸತಕ್ಕದ್ದು. ಒಬ್ಬ ಅಭ್ಯರ್ಥಿಯು ಕೆಲವು ಸೇವೆಗಳು ಅಥವಾ ಹುದ್ದೆಗಳಿಗೆ ಮಾತ್ರ ಆದ್ಯತೆಯ ಕ್ರಮವನ್ನು ಸೂಚಿಸಿದ್ದಲ್ಲಿ, ಅವರನ್ನು ಉಳಿದ ಸೇವೆಗಳು ಅಥವಾ ಹುದ್ದೆಗಳಿಗೂ ಪರಿಗಣಿಸಬಹುದು. ಅಭ್ಯರ್ಥಿಯು ಯಾವುದೇ ಸೇವೆಗಳು ಅಥವಾ ಹುದ್ದೆಗಳಿಗೆ ಆದ್ಯತೆಯ ಕ್ರಮವನ್ನು ಸೂಚಿಸದಿದ್ದಲ್ಲಿ, ಅವರನ್ನು ಯಾವುದೇ ಸೇವೆಗಳು ಅಥವಾ ಹುದ್ದೆಗಳಿಗೆ ಪರಿಗಣಿಸಬಹುದು."

**4. ಹೊಸ ನಿಯಮ 5ಎ ಸೇರ್ಪಡೆ**:- ಸದರಿ ನಿಯಮಗಳಲ್ಲಿ, ನಿಯಮ 5ರ ನಂತರ, ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು, ಅವುಗಳೆಂದರೆ:-

**5ಎ. ಸ್ಪರ್ಧಾತ್ಮಕ ಪರೀಕ್ಷೆಗೆ ಪ್ರವೇಶ.—** ನಿಯಮ 2ರ ಉಪನಿಯಮ (1)ರ ಖಂಡ (ಡಿ)ಯಲ್ಲಿ ನಿರ್ದಿಷ್ಟಪಡಿಸಿರುವ ಕನಿಷ್ಠ ಶೈಕ್ಷಣಿಕ ಅರ್ಹತೆಯನ್ನು ಹೊಂದಿದ್ದು, ಆಯ್ಕೆ ಪ್ರಾಧಿಕಾರದಿಂದ ಪ್ರವೇಶ ಪ್ರಮಾಣಪತ್ರವನ್ನು ನೀಡಲಾಗಿರುವ ಅಭ್ಯರ್ಥಿಯನ್ನು ಹೊರತುಪಡಿಸಿ, ಯಾವುದೇ ಅಭ್ಯರ್ಥಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ಪ್ರವೇಶ ನೀಡತಕ್ಕದ್ದಲ್ಲ. ಸ್ಪರ್ಧಾತ್ಮಕ ಪರೀಕ್ಷೆಗೆ ಪ್ರವೇಶ ಪಡೆಯಲು ಅಭ್ಯರ್ಥಿಯು ಅರ್ಹನಾಗಿದ್ದಾನೆಯೇ ಅಥವಾ ಅನರ್ಹನಾಗಿದ್ದಾನೆಯೇ ಎಂಬುದರ ಕುರಿತು ಆಯ್ಕೆ ಪ್ರಾಧಿಕಾರವು ಕೈಗೊಳ್ಳುವ ನಿರ್ಣಯವು ಅಂತಿಮವಾಗಿರತಕ್ಕದ್ದು."

**5. ನಿಯಮ 6ರ ತಿದ್ದುಪಡಿ**:- ಸದರಿ ನಿಯಮಗಳಲ್ಲಿ, ನಿಯಮ 6ರಲ್ಲಿ,-

(i) ಉಪನಿಯಮ (1)ರಲ್ಲಿ, ಖಂಡ (ಸಿ)ಯಲ್ಲಿ, "ರಾಜ್ಯದ ನೀತಿ" ಎಂಬ ಪದಗಳ ನಂತರ "ಅಭ್ಯರ್ಥಿಯು ತನ್ನ ಅರ್ಜಿಯಲ್ಲಿ ಸೂಚಿಸಿರುವ ಆದ್ಯತೆಗಳ ಆಧಾರದ ಮೇಲೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) ಉಪನಿಯಮ (2)ರಲ್ಲಿ,-

(ಎ) ಶೀರ್ಷಿಕೆಯಲ್ಲಿ**,** "ಸಿ. ಹುದ್ದೆಗಳು" ಎಂಬ ಪದಗಳ ನಂತರ "(ತಾಂತ್ರಿಕೇತರ)" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಖಂಡ (ಸಿ)ಯಲ್ಲಿ, "ರಾಜ್ಯದ ನೀತಿ" ಎಂಬ ಪದಗಳ ನಂತರ "ಅಭ್ಯರ್ಥಿಯು ತನ್ನ ಅರ್ಜಿಯಲ್ಲಿ ಸೂಚಿಸಿರುವ ಆದ್ಯತೆಗಳ ಆಧಾರದ ಮೇಲೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(iii) ಉಪನಿಯಮ (2)ರ ನಂತರ, ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅವುಗಳೆಂದರೆ:—

**"(3) ಗುಂಪು-ಸಿ ಹುದ್ದೆಗಳಿಗೆ (ತಾಂತ್ರಿಕ) ಸಂಬಂಧಿಸಿದಂತೆ.-**

**(ಎ)** ಉಪನಿಯಮ (2)ರಲ್ಲಿ ಉಲ್ಲೇಖಿಸಿರುವ ಹುದ್ದೆಗಳನ್ನು ಹೊರತುಪಡಿಸಿ ಇತರ ಹುದ್ದೆಗಳಿಗೆ ಎರಡು ಪತ್ರಿಕೆಗಳಿರತಕ್ಕದ್ದು. ಪ್ರತಿ ಪತ್ರಿಕೆಗೆ 100 ಅಂಕಗಳಂತೆ ಒಟ್ಟು 200 ಅಂಕಗಳಿರತಕ್ಕದ್ದು. ಈ ಎರಡೂ ಪತ್ರಿಕೆಗಳು ಕಡ್ಡಾಯವಾಗಿರತಕ್ಕದ್ದು. ಪದವಿ ಅರ್ಹತೆಯ ಅಗತ್ಯವಿರುವ ಹುದ್ದೆಗಳಿಗೆ ಪತ್ರಿಕೆ–1ರ ಪಠ್ಯಕ್ರಮವು ಉಪನಿಯಮ (2)ರ ಖಂಡ (ಎ)ಯ ಅಂಶ (i)ರಲ್ಲಿ ನಿರ್ದಿಷ್ಟಪಡಿಸಿದಂತೆ ಹಾಗೂ **ಪದವಿಗಿಂತ ಕಡಿಮೆ ಶೈಕ್ಷಣಿಕ ಅರ್ಹತೆಯ ಅಗತ್ಯವಿರುವ ಹುದ್ದೆಗಳಿಗೆ ಉಪನಿಯಮ (2)ರ ಖಂಡ (ಬಿ)ಯ ಅಂಶ (i)ರಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.**

"(ಬಿ) ಪತ್ರಿಕೆ–IIರ ಪಠ್ಯಕ್ರಮವನ್ನು ಹುದ್ದೆಯ ಸ್ವರೂಪ ಮತ್ತು ಅಗತ್ಯವಿರುವ ಶೈಕ್ಷಣಿಕ ಅರ್ಹತೆಯನ್ನು ಪರಿಗಣಿಸಿ, ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರು ಅಥವಾ ನೇಮಕಾತಿ ಪ್ರಾಧಿಕಾರದೊಂದಿಗೆ ಸಮಾಲೋಚನೆ ನಡೆಸಿದ ನಂತರ, ಆಯ್ಕೆ ಪ್ರಾಧಿಕಾರವು ನಿರ್ಧರಿಸತಕ್ಕದ್ದು."

"(ಸಿ) ಎರಡೂ ಪತ್ರಿಕೆಗಳಿಗೆ ಋಣಾತ್ಮಕ ಅಂಕಗಳು ಅನ್ವಯವಾಗತಕ್ಕದ್ದು. ಪ್ರತಿ ತಪ್ಪು ಉತ್ತರಕ್ಕೆ, ಆ ಪ್ರಶ್ನೆಗೆ ನಿಗದಿಪಡಿಸಿರುವ ಅಂಕಗಳ ನಾಲ್ಕನೇ ಒಂದು ಭಾಗದಷ್ಟು ಅಂಕಗಳನ್ನು ಕಡಿತಗೊಳಿಸತಕ್ಕದ್ದು.

(ಇ) ಅಭ್ಯರ್ಥಿಯು ತನ್ನ ಅರ್ಜಿಯಲ್ಲಿ ಸೂಚಿಸಿರುವ ಆದ್ಯತೆಗಳ ಆಧಾರದ ಮೇಲೆ ಹಾಗೂ ರಾಜ್ಯದ ಮೀಸಲಾತಿ ನೀತಿಗೆ ಒಳಪಟ್ಟು, ಮೇಲಿನ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿರುವ ಒಟ್ಟು ಅಂಕಗಳ ಶೇಕಡಾವಾರು ಆಧಾರದ ಮೇಲೆ ನಿರ್ಧರಿಸಲಾದ ಮೆರಿಟ್ ಕ್ರಮದಲ್ಲಿ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು:

**ಪರಂತು,** ಅರ್ಹತೆ ಪಡೆಯಲು ಅಭ್ಯರ್ಥಿಯು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಒಟ್ಟು ನಿಗದಿಪಡಿಸಿದ ಅಂಕಗಳಲ್ಲಿ ಕನಿಷ್ಠ ಶೇಕಡಾ 35ರಷ್ಟು ಅಂಕಗಳನ್ನು ಗಳಿಸತಕ್ಕದ್ದು."

**(4) ಪರೀಕ್ಷೆಯ ಅವಧಿ:** - ಉಪನಿಯಮ (1), ಉಪನಿಯಮ (2) ಮತ್ತು ಉಪನಿಯಮ (3)ರಲ್ಲಿ ನಿರ್ದಿಷ್ಟಪಡಿಸಿರುವ ಪಠ್ಯಕ್ರಮದ ಪರೀಕ್ಷೆಯನ್ನು ನಡೆಸಲು, ಪ್ರತಿ ಪತ್ರಿಕೆಗೆ ಗರಿಷ್ಠ 120 ನಿಮಿಷಗಳ ಅವಧಿಯನ್ನು ನಿಗದಿಪಡಿಸತಕ್ಕದ್ದು."

**6. ನಿಯಮ 11ಕ್ಕೆ ತಿದ್ದುಪಡಿ**:- ಸದರಿ ನಿಯಮಗಳಲ್ಲಿ, ನಿಯಮ 11ರಲ್ಲಿ,-

**i)** ಉಪನಿಯಮ (1)ರಲ್ಲಿ**,** "ರಾಜ್ಯದ ನೀತಿ" ಎಂಬ ಪದಗಳ ನಂತರ "ಅಭ್ಯರ್ಥಿಗಳು ತಮ್ಮ ಅರ್ಜಿಗಳಲ್ಲಿ ಸೂಚಿಸಿರುವ ಆದ್ಯತೆಯ ಕ್ರಮದ ಆಧಾರದ ಮೇಲೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

**(ii)** ಉಪನಿಯಮ (4)ರ ನಂತರ, ಈ ಕೆಳಗಿನ ಉಪನಿಯಮವನ್ನು ಸೇರಿಸತಕ್ಕದ್ದು, ಅವುಗಳೆಂದರೆ:—

"(4-ಎ) ನಿಯಮ 12ರ ಅಡಿಯಲ್ಲಿ ನೇಮಕಾತಿ ಆದೇಶಗಳನ್ನು ನೀಡಲಾದ ಅಭ್ಯರ್ಥಿಗಳು ನೇಮಕಾತಿಗೆ ಅನರ್ಹರೆಂದು ಕಂಡುಬಂದಲ್ಲಿ ಅಥವಾ ನಿಗದಿತ ಸೇರಿಕೆ ಕಾಲ ಮಿತಿಯೊಳಗೆ ಅಥವಾ ಅನುಮತಿಸಬಹುದಾದ ವಿಸ್ತರಿಸಿದ ಕಾಲಮಿತಿಯೊಳಗೆ ಕರ್ತವ್ಯಕ್ಕೆ ಹಾಜರಾಗಲು ವಿಫಲರಾದಲ್ಲಿ, ಅಂತಹ ಅಭ್ಯರ್ಥಿಗಳ ಬದಲಿಗೆ, ನೇಮಕಾತಿ ಪ್ರಾಧಿಕಾರವು ಉಪನಿಯಮ (3)ರ ಅಡಿಯಲ್ಲಿ ಆಯ್ಕೆ ಪ್ರಾಧಿಕಾರವು ಸಿದ್ಧಪಡಿಸಿರುವ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ನಿಯೋಜಿಸುವಂತೆ ಕೋರಬಹುದು. ಅಂತಹ ಸಂದರ್ಭದಲ್ಲಿ, ಆಯ್ಕೆ ಪ್ರಾಧಿಕಾರವು ಇತರ ನೇಮಕಾತಿ ಪ್ರಾಧಿಕಾರಗಳಿಗೆ ಈಗಾಗಲೇ ನಿಯೋಜಿಸಿರುವ ಮುಖ್ಯ ಪಟ್ಟಿಯನ್ನು ಪರಿಗಣಿಸದೆ, ಹೆಚ್ಚುವರಿ ಪಟ್ಟಿಯಿಂದ ಮಾತ್ರ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಅಭ್ಯರ್ಥಿಯನ್ನು ನಿಯೋಜಿಸತಕ್ಕದ್ದು. ಹಾಗೆ ನಿಯೋಜಿಸಲಾದ ಅಭ್ಯರ್ಥಿಯು ನೇಮಕಾತಿಗೆ ಅನರ್ಹರೆಂದು ಕಂಡುಬಂದ ಅಥವಾ ಕರ್ತವ್ಯಕ್ಕೆ ಹಾಜರಾಗಲು ವಿಫಲರಾದ ಅಭ್ಯರ್ಥಿಯು ಸೇರಿದ ಅದೇ ಲಂಬ ಮತ್ತು ಸಮತಳ ಮೀಸಲಾತಿ ವರ್ಗಕ್ಕೆ ಸೇರಿದವರಾಗಿರತಕ್ಕದ್ದು."

**7. ಹೊಸ ನಿಯಮ 11ಎ ಸೇರ್ಪಡೆ**:- ಸದರಿ ನಿಯಮಗಳಲ್ಲಿ, ನಿಯಮ 11ರ ನಂತರ, ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು, ಅವುಗಳೆಂದರೆ:-

**"11ಎ. ಅಭ್ಯರ್ಥಿಗಳು ರಾಜ್ಯದ ಯಾವುದೇ ಭಾಗದಲ್ಲಿ ಸೇವೆ ಸಲ್ಲಿಸತಕ್ಕದ್ದು;-** ನಿಯಮ 4ಎರ ಅಡಿಯಲ್ಲಿ ಅಭ್ಯರ್ಥಿಗಳು ತಮ್ಮ ಅರ್ಜಿಗಳಲ್ಲಿ ಸೂಚಿಸಿರುವ ಆದ್ಯತೆಯ ಕ್ರಮ ಏನೇ ಇದ್ದರೂ, ಈ ನಿಯಮಗಳ ಅಡಿಯಲ್ಲಿ ಆಯ್ಕೆಯಾಗಿ ನೇಮಕಗೊಂಡ ಅಭ್ಯರ್ಥಿಗಳು ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿ ಸೇವೆ ಸಲ್ಲಿಸಲು ಬಾಧ್ಯರಾಗಿರತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪ್ರತಿಭಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-3)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU